**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ರವರು ದಿನಾಂಕ:16/07/2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ "ವಿದ್ಯುತ್ ಸಮರ್ಪಕವಾಗಿರದ ಕಾರಣ ಕರಡಿ ಹಾವಳಿಯಿಂದಾಗಿ ಗ್ರಾಮಾಂತರ ಜಿಲ್ಲೆಗಳಲ್ಲಿ ಮನುಷ್ಯರು ಹಾಗೂ ಬೆಳೆಹಾನಿಗಳಿಂದ ರೈತರು ಕಂಗಾಲಾಗಿರುವ ಬಗ್ಗೆ" ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

*****

ವಿದ್ಯುತ್ ಸಮರ್ಪಕವಾಗಿರದ ಕಾರಣ ಕರಡಿ ಹಾವಳಿಯಿಂದಾಗಿ ಗ್ರಾಮಾಂತರ ಜಿಲ್ಲೆಗಳಲ್ಲಿ ಮನುಷ್ಯರು ಹಾಗೂ ಬೆಳೆಹಾನಿಗಳ ಆಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ರಾಜ್ಯದಲ್ಲಿ ಕುರುಚಲು ಕಾಡು ಮತ್ತು ಒಣ ಪ್ರದೇಶಗಳಲ್ಲಿ ಕರಡಿಗಳು ಹೆಚ್ಚಾಗಿ ಕಂಡುಬಂದಿದ್ದು, ಅವುಗಳಲ್ಲಿ ಬಳ್ಳಾರಿ, ವಿಜಯನಗರ, ಚಿತ್ರದುರ್ಗ, ಕೊಪ್ಪಳ, ಚಿಕ್ಕಬಳ್ಳಾಪುರ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ಹೆಚ್ಚಾಗಿ ಕರಡಿಗಳು ಕಂಡುಬಂದಿರುತ್ತವೆ. ಮುಂದುವರೆದು ಇತ್ತೀಚಿನ ದಿನಗಳಲ್ಲಿ ತೀವ್ರ ರೀತಿಯ ಬರಗಾಲ ಪರಿಸ್ಥಿತಿಯಿಂದಾಗಿ ಕರಡಿಗಳು ಅನಿವಾರ್ಯತೆಯಿಂದ ಕಾಡಿನಿಂದ ಹೊರಬರುವ ಸನ್ನಿವೇಶಗಳು ಕಂಡುಬರುತ್ತಿವೆ.

**ಕರಡಿ ಹಾವಳಿಯನ್ನು ತಡೆಗಟ್ಟಲು ಇಲಾಖಾ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-**

1. ರಾಜ್ಯದಲ್ಲಿ ಕರಡಿ ಮತ್ತು ಇತರೆ ವನ್ಯಜೀವಿ ಸಂಕುಲಗಳ ಸಂರಕ್ಷಣೆ ಹಾಗೂ ಮಾನವ-ಕರಡಿ ಸಂಘರ್ಷ ನಿಯಂತ್ರಣಕ್ಕಾಗಿ ಬಳ್ಳಾರಿ ಜಿಲ್ಲೆಯಲ್ಲಿ ದರೋಜಿ ಹಾಗೂ ಗುಡೇಕೋಟೆ ಕರಡಿಧಾಮವನ್ನು ಘೋಷಣೆ ಮಾಡಲಾಗಿದೆ. ಅಲ್ಲದೇ, ಹಾಸನ ಜಿಲ್ಲೆಯ ಅರಸೀಕೆರೆ ಕರಡಿಧಾಮವನ್ನು ಹಾಗೂ ಕೊಪ್ಪಳ ಜಿಲ್ಲೆಯ ಹಿರೇಸೂಲಿಕೇರೆ ಕರಡಿ ಸಂರಕ್ಷಣಾ ಮೀಸಲು ಪ್ರದೇಶವೆಂದು ಘೋಷಣೆ ಮಾಡಿ ಆವಾಸಸ್ಥಾನ ಅಭಿವೃದ್ಧಿ ಮತ್ತು ಮಾನವ-ಕರಡಿ ಸಂಘರ್ಷ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
2. ಕರಡಿಗಳು ಅರಣ್ಯ ಪ್ರದೇಶದಿಂದ ಹೊರ ಬಂದಂತಹ ಸಂದರ್ಭಗಳಲ್ಲಿ ಇಲಾಖೆ ಸಿಬ್ಬಂದಿಗಳು ಕೂಡಲೇ ಅವುಗಳನ್ನು ಪುನಃ ಕಾಡಿಗೆ ಹಿಮ್ಮೆಟ್ಟಿಸಲು ಕ್ರಮವಹಿಸಲಾಗುತ್ತಿದೆ.
3. ಕರಡಿಗಳು ಅರಣ್ಯದಿಂದ ಹೊರಬಂದಂತಹ ಸಂದರ್ಭದಲ್ಲಿ ಕರಡಿ ಸೆರೆಹಿಡಿಯಲು ಬೋನುಗಳನ್ನು ಇಟ್ಟು ಕ್ರಮವಹಿಸಲಾಗುತ್ತಿದೆ.
4. ಇಲಾಖಾ ಮುಂಚೂಣಿ ಸಿಬ್ಬಂದಿಗಳಿಂದ ಹಗಲು-ರಾತ್ರಿ ಗಸ್ತು ಕಾರ್ಯ ನಿರ್ವಹಿಸಲಾಗುತ್ತಿದೆ.
5. ಅರಣ್ಯ ಪ್ರದೇಶಗಳಲ್ಲಿ ನೀರಿನ ಸೌಲಭ್ಯ ಒದಗಿಸಲು ಕೆರೆಗಳ ನಿರ್ಮಾಣ, ಕೆರೆಗಳ ಹೂಳೆತ್ತುವಿಕೆ ಮತ್ತು ಚೆಕ್ ಡ್ಯಾಂ, ಗಲ್ಲಿಚೆಕ್ಸ್ ನಿರ್ಮಾಣ ಹಾಗೂ ಸೋಲಾರ್ ಪವರ್ಡ್ ಪಂಪ್ ಮೂಲಕ ಕೆರೆಗಳಿಗೆ ನೀರು ಹಾಯಿಸುವ ಮೂಲಕ ಮಣ್ಣು ಮತ್ತು ತೇವಾಂಶ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.
6. ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
7. ಕರಡಿಯನ್ನೊಳಗೊಂಡಂತೆ ವನ್ಯಪ್ರಾಣಿಗಳು ಅರಣ್ಯದಿಂದ ಹೊರಬಂದ ಸಂದರ್ಭದಲ್ಲಿ ಮುನ್ನೆಚ್ಚರಿಕ ಕ್ರಮವಾಗಿ ಅಡ್ವಾನ್ಸ್ ಅಲರ್ಟ್ ಸಿಸ್ಟಮ್ ಅನ್ನು ಜಾರಿಗೊಳಿಸಲಾಗಿದೆ.
8. ನಾಮಫಲಕ ಮತ್ತು ಮಾಹಿತಿ ಫಲಕಗಳನ್ನು ಅಳವಡಿಸುವ ಕ್ರಮ ಕೈಗೊಳ್ಳಲಾಗಿದೆ.
9. ಕರಡಿ ದಾಳಿಯಿಂದ ಉಂಟಾಗುವ ವಿವಿಧ ಹಾನಿ ಪ್ರಕರಣಗಳಾದ ಮಾನವ ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಮಾನವ ಗಾಯ, ಬೆಳೆಹಾನಿ, ಆಸ್ತಿ-ಪಾಸ್ತಿ ನಷ್ಟಕ್ಕೆ ಚಾಲ್ತಿಯಲ್ಲಿರುವ ಸರ್ಕಾರಿ ಆದೇಶಗಳನ್ವಯ ನಿಯಮಾನುಸಾರ ಪರಿಹಾರ ಧನ ಪಾವತಿಸಲಾಗುತ್ತಿದೆ.

...2..

ಕಳೆದ ಮೂರು ವರ್ಷಗಳಲ್ಲಿ ಪರಿಹಾರ ಪಾವತಿಸಿರುವ ವಿವರಗಳು ಈ ಕೆಳಕಂಡಂತಿದೆ:-

| ವಿವರ | 2021-22 | | 2022-23 | | 2023-24 | |
|---|---|---|---|---|---|---|
| | ಪ್ರಕರಣ | ಪಾವತಿಸಲಾದ ಮೊತ್ತ ರೂಗಳಲ್ಲಿ | ಪ್ರಕರಣ | ಪಾವತಿಸಲಾದ ಮೊತ್ತ ರೂಗಳಲ್ಲಿ | ಪ್ರಕರಣ | ಪಾವತಿಸಲಾದ ಮೊತ್ತ ರೂಗಳಲ್ಲಿ |
| ಬೆಳೆನಾಶ | 169 | 1169865/- | 167 | 1020000/- | 258 | 2207292/- |
| ಮಾನವ ಪ್ರಾಣಹಾನಿ / ಮಾಸಾಶನ | - | - | - | - | 2 | 240000/- |
| ಮಾನವಗಾಯ | 6 | 200000/- | 5 | 170000/- | 13 | 310000/- |
| ಸಾಕುಪ್ರಾಣಿ ಹತ್ಯೆ | 20 | 209625/- | 22 | 260000/- | 19 | 204000/- |

10. ಸೂರ್ಯಾಸ್ತದ ನಂತರ ಅಥವಾ ಸೂರ್ಯೋದಯಕ್ಕೆ ಮುನ್ನ ರೈತರು ಹೆಚ್ಚಾಗಿ ಕೆಲಸದ ನಿಮಿತ್ತ ಗದ್ದೆ-ತೋಟಗಳಿಗೆ ಹೋಗುವ ಸಂದರ್ಭ ಅಥವಾ ರಾತ್ರಿ ಸಮಯದಲ್ಲಿ ಹೊಲಗಳಿಗೆ ನೀರನ್ನು ಹಾಯಿಸಲು ಅಥವಾ ಹೊಲಗಳನ್ನು ಕಾಯಲು ಹೋದಾಗ ಕರಡಿ ದಾಳಿಗೆ ತುತ್ತಾಗಿ ಮಾನವ-ಪ್ರಾಣಹಾನಿ ಪ್ರಕರಣಗಳು ಉಂಟಾಗುತ್ತಿರುವ ಬಗ್ಗೆ ಅಧ್ಯಯನ ನಡೆಸಿ, ವರದಿ ಪಡೆದು ಸದರಿ ಪ್ರಕರಣಗಳು ನಿಜವೆಂದು ಕಂಡುಬಂದಲ್ಲಿ ಮಾನವ-ಪ್ರಾಣಹಾನಿಯಾಗುತ್ತಿರುವ ಪ್ರದೇಶಗಳಲ್ಲಿನ ರೈತರ ಜಮೀನುಗಳಿಗೆ ರಾತ್ರಿ ಬದಲು ಹಗಲಿನ ಸಮಯದಲ್ಲಿ ವಿದ್ಯುತ್ ಹರಿಸುವ ಕುರಿತು ಇಂಧನ ಇಲಾಖೆಯೊಂದಿಗೆ ಸೂಕ್ತವಾಗಿ ವ್ಯವಹರಿಸಿ ಅವಶ್ಯ ಕ್ರಮ ಕೈಗೊಳ್ಳಲಾಗುವುದು.

---

**ಸಂಖ್ಯೆ: ಅಪಜೀ 99 ಎಫ್‌ಡಬ್ಲ್ಯೂಎಲ್ 2024**

**(ಈಶ್ವರ ಬಿ.ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು